ಮಾಡಿ ತೋರಿಸುವ ಉದ್ದೇಶ ಇದು' ಎಂದರು. ನನಗೂ ಅದು ನಿಜವೆನಿಸಿತು. ಒಂದು ಭಾಷಾಂತರಿತ ನಾಟಕ ನೋಡುವುದಕ್ಕಿಂತ 'ಸಂಗ್ಯಾ ಬಾಳ್ಯ' ನಾಟಕವನ್ನು ನೋಡುವುದು ಅಷ್ಟೇ ಮುಖ್ಯವಾಗಬೇಕು. ಅಂತೆಯೇ ನಮ್ಮ ಜನಪದ ಹಾಡುಗಳ ಕಥನವನ್ನೇ ನಾವು ಯಾಕೆ ಬೇರೆಯವರಿಗೆ ಕೇಳಿಸಬಾರದು?

**● ಜಾನಪದ ಮತ್ತು ಸೃಜನಶೀಲ ಸಾಹಿತ್ಯದ ಹದವರಿತ ಸಂಕರದಲ್ಲಿ ನಿಮ್ಮ ಸೃಜನಶೀಲ ಬರವಣಿಗೆ ಹೊಸ ಆಯಾಮ ಪಡೆದಿದೆ. ನಿಮ್ಮ ಕಥನ ಸಾಹಿತ್ಯವನ್ನೂ ಒಳಗೊಂಡಂತೆ ನಿಮ್ಮ ಸೃಜನಶೀಲ ಬರವಣಿಗೆಯ ಸಂವಿಧಾನ, ಅಭಿವ್ಯಕ್ತಿ ಮತ್ತು ಆಕಾಂಕ್ಷೆಗಳ ಕುರಿತು ಹೇಳಿ.**

ಹಳಗನ್ನಡ ಓದಿಕೊಂಡ ನಾನು ಸರ್ಕಾರಿ ಕಾಲೇಜು ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಬಹಳಮಟ್ಟಿಗೆ ಹಳಗನ್ನಡವನ್ನೇ ಪಾಠ ಮಾಡಿಕೊಂಡು ಬಂದವನು. ಆದರೆ ನನಗೆ ಬರವಣಿಗೆ ಸಾಧ್ಯವಾದದ್ದು ಕತೆ ಕಾದಂಬರಿಯ ಮೂಲಕವೆ. ಇದರೊಂದಿಗೆ ನಾನು ಗ್ರಾಮಗಳ ಮೇಲೆ ವರ್ಷಗಟ್ಟಲೆ ಕುತೂಹಲದಿಂದಲೇ, ಆಸಕ್ತಿಯಿಂದಲೇ ಓಡಾಡಿದೆನಲ್ಲ! ಆ ಅನುಭವಗಳೇ ನನ್ನಲ್ಲಿ ತುಂಬಿಕೊಂಡು ಯಾವುದನ್ನೂ ಕಲ್ಪಿಸಿಕೊಂಡು ಹೇಳಬೇಕಾಗಿಲ್ಲ, ನಾನು ಕಂಡದ್ದನ್ನೇ ಹೇಳಿದರೆ ಸಾಕು ಎನಿಸುವಂತಾಯಿತು. ಆ ಹಿನ್ನೆಲೆಯಲ್ಲೇ 'ಬಾರೊ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿಗಳು ಇನ್ನಿತರ ಕತೆಗಳು ಹುಟ್ಟಿಕೊಂಡವು. ಇತ್ತೀಚೆಗೆ ಅಪಾರ ಸಂಖ್ಯೆಯ ಓದುಗರು ಓದಿರುವ ಅಜ್ಞಾತನೊಬ್ಬನ ಆತ್ಮಚರಿತ್ರೆ ಐತಿಹಾಸಿಕ ಕಥನವಾದರೂ ಅದು ಸಂಪೂರ್ಣ ಜನಪದ ಹಿನ್ನೆಲೆಯದೆ. 'ಬಾರೊ ಗೀಜಗನೆ' ಕಾದಂಬರಿಯ ವಸ್ತುವೆಂದರೆ ನಮ್ಮಲ್ಲಿ ಜಾತಿಗೂ, ವೃತ್ತಿಗೂ ಸಂಬಂಧವಿದೆಯಲ್ಲವೆ, ಅದು ಯಾಕೆ ಬದಲಾಗಬಾರದು ಎಂಬುದು ನನ್ನ ಅನಿಸಿಕೆ. ಇಂಥ ಜಾತಿಯವನು ಇಂಥಾ ವೃತ್ತಿಯನ್ನೇ ಮಾಡಬೇಕು ಎಂಬುದೇ ಅಪಾಯಕಾರಿ ಸಂಗತಿ. ನಮ್ಮಲ್ಲಿ ಎಲ್ಲ ತಾರತಮ್ಯಗಳನ್ನು ಸೃಷ್ಟಿ ಮಾಡಿರುವುದು ಇದೇ. ಇದು ಬದಲಾದರೆ ಹೇಗಾಗಬಹುದು ಎಂಬ ಹಿನ್ನೆಲೆಯಲ್ಲಿ ಮೊದಲ ಕಾದಂಬರಿ ಬರೆದೆ. ಎರಡನೆಯ 'ನಿಕ್ಷೇಪ' ಕಾದಂಬರಿ ತಮಿಳುನಾಡಿನ ಜೀವನವನ್ನು ಆಧರಿಸಿ ಬರೆದದ್ದು. ಅಲ್ಲಿ ನಾಲ್ಕು ವರ್ಷ ಇದ್ದುದರ ಅನುಭವ. ಹಾಗಾಗಿ ಅದು ತಮಿಳು ಪ್ರದೇಶದ ಕನ್ನಡ ಕಾದಂಬರಿ. 'ಪ್ರಜಾವಾಣಿ'ಯಲ್ಲಿ ಧಾರಾವಾಹಿಯಾಗಿ ಬಂದಿತು. 'ಅಜ್ಞಾತನೊಬ್ಬನ ಆತ್ಮ ಚರಿತ್ರೆ' ಟಿಪ್ಪು, ಹೈದರ್‌ನ ಸೈನ್ಯದಲ್ಲಿದ್ದ ಒಬ್ಬ ಸೈನಿಕನ ಕತೆ. ನಾವು ಯಾವುದೇ ಯುದ್ಧವನ್ನು ಇಲ್ಲಿಯವರೆಗೆ ಜಯಭೇರಿ ಮತ್ತು ನೋವಿನ ಸ್ಥಿತಿಗಳಲ್ಲಿ ಕೇಳಿಕೊಂಡೇ ಬಂದಿದ್ದೇವಲ್ಲಾ, ಆ ಯುದ್ಧದ ಅನಾಹುತಗಳು ಯಾವ್ಯಾವ ಬಗೆಯವು ಎಂಬುದನ್ನು ನಿರೂಪಿಸಿರುವ ಕಾದಂಬರಿಯೇ ಅಜ್ಞಾತ ಸೈನಿಕನ ಕತೆ. ನಾನು ಜನಪದರ ನಡುವೆ ಎಲ್ಲೆಲ್ಲಿ ಓಡಾಡಿದೆನೋ ಅಲ್ಲೆಲ್ಲಾ ಅದೇ ಬಗೆಯ ದುರಂತದ ಕತೆಗಳು ಕೇಳಿಬಂದವು. ಓದುಗ ವಿದ್ವಾಂಸರು, ಮಿತ್ರರು ಆ ಕೃತಿಯ ಯುದ್ಧವಿನಾಶದ ಸಂಗತಿಗಳು ತುಂಬಾ ಸಹಜವಾಗಿ ಇರುವುದೆಂದು ಪರಿಭಾವಿಸಿದ್ದರೆ ಅದಕ್ಕೆ ಕಾರಣ ಕ್ಷೇತ್ರ ಕಾರ್ಯವೇ. ನಾನು ಬುಡಕಟ್ಟು ಮತ್ತು ಜನಪದವಲ್ಲದೆ ಗ್ರಾಮೀಣ ಜೀವನ ವಿವರಗಳನ್ನಲ್ಲದೆ ಬೇರೆ ಬರೆಯುವಂತಿಲ್ಲ ಎಂದಾಗಿಬಿಟ್ಟಿದೆ. ಜನಪದ ಮೂಲ ಸಂಗತಿಗಳೇ ರೂಪಕಗಳಂತಿರುತ್ತವೆ. ಅದರ ಭಾಷಾ ಸಾಮರ್ಥ್ಯವೂ ಅಷ್ಟೇ ವೈವಿಧ್ಯಮಯ ಮತ್ತು ಸಮರ್ಥವಾದುದು.

**● ನಿಮ್ಮ ಕ್ಷೇತ್ರಕಾರ್ಯದ ಮೂಲಕ ನೀವು ದಾಖಲಿಸಿ ಉಳಿಸಿಕೊಟ್ಟ ಗ್ರಾಮ ಕಥಾನಕಗಳಲ್ಲಿ ಬರುವ ಪಾತ್ರಗಳ ಸಾಲು ದೊಡ್ಡದು. ಕಾವ್ಯ ಕಥನಗಳನ್ನು ತಮ್ಮ ನಾಲಗೆಯಲ್ಲಿ ಹಿಡಿದಿಟ್ಟು**